# 40

# ಅರಣ್ಯದಲ್ಲಿ ಕೂಗುವವನ ಧ್ವನಿ

## ಯೋಹಾನನ ಸೇವೆಯ, ಒಂದು ನಿಕಟ ನೋಟ

ಸುಮಾರು ಕ್ರಿ.ಶ. 26ರ ಸಮಯದಲ್ಲಿ ಯೊರ್ದಾನ ಹೊಳೆಯ ಆಚೆ ಕಡೆಯಲ್ಲಿರುವ ಬೇಥಾನ್ಯದಲ್ಲಿ ಸುಮಾರು ಮೂವತ್ತು ವರ್ಷದ ಬೋಧಕನೊಬ್ಬನು ಮೃತ ಸಮುದ್ರದ ಎರಡು ಬದಿಯಲ್ಲಿನ ಜನರನ್ನು ನಡಗಿಸುತ್ತಿದ್ದನು. ಯಾಜಕರ ಮತ್ತು ಲೇವಿಯವರ ಗುಂಪು ಆತನೆಡೆಗೆ ಬಂದು "ನೀನು ಯಾರು?" (ಯೋಹಾನ 1:19) ಎಂದು ಕೇಳಿದರು. ಈ ಪ್ರಶ್ನೆಗೆ ಕಾರಣವನ್ನು ಗ್ರಹಿಸಿಕೊಂಡ ಆತನು "ನಾನು ಕ್ರಿಸ್ತನಲ್ಲ" ಎಂದು ಉತ್ತರಿಸಿದನು (ಯೋಹಾನ 1:20). ಅವರು ತಮ್ಮ ವಿಚಾರಣೆಯಲ್ಲಿ ಪಟ್ಟುಹಿಡಿದರು:

> ಹಾಗಾದರೆ ನೀನು ಯಾರು? ಎಲೀಯನೋ ಎಂದು ಅವರು ಕೇಳಲು ಅಲ್ಲವೆಂದನು ನೀನು ಬರಬೇಕಾದ ಆ ಪ್ರವಾದಿಯೋ ಅಂದದ್ದಕ್ಕೂ ಅಲ್ಲವೆಂದನು. ಆಗ ಅವರು ನೀನು ಯಾರು? ನಮ್ಮನ್ನು ಕಳುಹಿಸಿದವರಿಗೆ ನಾವು ಉತ್ತರಹೇಳಬೇಕಲ್ಲಾ; ನಿನ್ನ ವಿಷಯವಾಗಿ ಏನು ಹೇಳುತ್ತಿ? ಎಂದು ಕೇಳಿದರು (ಯೋಹಾನ 1:21 22).

"ಅಡವಿಯಲ್ಲಿ ಕೂಗುವವನ ಶಬ್ದವಿದೆ ಆ ಶಬ್ದವೇ ನಾನು" (ಯೋಹಾನ 1:23) ಎಂಬ ಗೂಢವಾದ ಉತ್ತರವು ಅವರಿಗೆ ಮರಳಿಬಂತು.

ತನ್ನನ್ನು ತಾನು "ಅಡವಿಯಲ್ಲಿ ಕೂಗುವವನ ಶಬ್ದವದೆ ... ಆ ಶಬ್ದವೇ ನಾನು" ಎಂದು ಕರೆದು ಕೊಳ್ಳುತ್ತಿರುವ ಆ ಒಬ್ಬ ತರುಣನೇ ಸ್ನಾನಿಕನಾದ ಯೋಹಾನನು[1] ಆತನ ಪದಗಳು ಮೆಸ್ಸೀಯನಿಗಾಗಿ ಮುನ್ನುಡಿದ ಪದಗಳಾಗಿದ್ದು ಯೆಶಾಯ 40ರಿಂದ ಬಂದವುಗಳಾಗಿವೆ:

> ಇಗೋ, ಒಂದು ವಾಣಿ! ಅರಣ್ಯದಲ್ಲಿ ಯೆಹೋವನ ದಾರಿಯನ್ನು ಸರಿಪಡಿಸಿರಿ, ಅಡವಿಯಲ್ಲಿ ನಮ್ಮ ದೇವರಿಗೆ ರಾಜಮಾರ್ಗವನ್ನು ನೆಟ್ಟಗೆ ಮಾಡಿರಿ; ಎಲ್ಲಾ ಹಳ್ಳಕೊಳ್ಳ ಗಳು ಮುಚ್ಚಲ್ಪಡುವವು, ಎಲ್ಲಾ ಬೆಟ್ಟಗುಡ್ಡಗಳು ತಗ್ಗಿಸಲ್ಪಡುವವು ಮಲೆನಾಡು ಬೈಲು ಸೀಮೆಯಾಗುವದು, ಕೊರಕಲ ನೆಲವು ಸಮವಾಗುವದು (ಯೆಶಾಯ 40:3, 4).[2]

ಯೋಹಾನ 1:23ರಲ್ಲಿನ, "ಅಡವಿಯಲ್ಲಿ ... ಕೂಗುವವನ ಶಬ್ದವಿದೆ" ಎಂಬ ಪದವು ಅದು ಯೋಹಾನನೇ ಎಂಬ ಸತ್ಯಾಂಶವನ್ನು ತಿಳಿಸುವುದಾಗಿದೆ: ಮೊದಲನೆಯದಾಗಿ ಮತ್ತು ಹೆಚ್ಚಾಗಿ, ಆತನು ಒಂದು ಧ್ವನಿಯಾಗಿದ್ದನು; ಆತನು ಸಂದೇಶದ ವ್ಯಕ್ತಿಯಾಗಿದ್ದನು. ಆತನ ಸಂದೇಶವು ಒಂದು ಪ್ರಮುಖವಾದ ರೀತಿಯಲ್ಲಿ ಇಡಲ್ಪಟ್ಟಿತು: ಅಡವಿಯಲ್ಲಿ, ಯೋಹಾನನ ಅಕ್ಷರ ಸಹ ಭೌತಿಕವಾದ ಅರಣ್ಯದಲ್ಲಿ ಬೋಧಿಸಿದನು, ಆದರೆ ಯೆಶಾಯ 40 ಮತ್ತು ಯೋಹಾನ 1ರಲ್ಲಿ ಸೂಚಿತವಾದ "ಅರಣ್ಯವು" ಹೆಚ್ಚಾಗಿ ಕಲ್ಲು ಉಸುಕು ಮತ್ತು ಚೇಳುಗಳಿಗಿಂತಲೂ ಮಿಗಿಲಾಗಿತ್ತು. ಯೋಹಾನನೂ ಸಹ ಪಾಪದ ಅರಣ್ಯದ ಬಗೆಗೆ ಬೋಧಿಸಿದನು. ಎಲ್ಲಿ ಧ್ವನಿಯು ಶಾಂತವಾಗಿತ್ತೋ ಅಲ್ಲಿ ಧ್ವನಿಯಾಗುವ ಧೈರ್ಯವನ್ನು ಆತನು ಮಾಡಿದನು.

ಈ ಪ್ರಸಂಗದಲ್ಲಿ, ತನ್ನ ಸಮಯದಲ್ಲಿ ಮತ್ತು ನಮ್ಮ ಸಮಯದಲ್ಲೂ ತಾನೇ ಸಂದೇಶ ಆದಂತ ಆ ಮನುಷ್ಯನನ್ನು ಶ್ಲಾಘಿಸುತ್ತಾ ನಾವು ಯೋಹಾನನ ಜೀವಿತವನ್ನು ವಿವರವಾಗಿ ನೋಡೋಣ.[3]

## ಸ್ವಾರ್ಥತೆಯೆಂಬ ಅರಣ್ಯದಲ್ಲಿ "ನಿನ್ನನ್ನು ನಿರಾಕರಿಸು" ಎಂಬ ಕೂಗು

ಯೋಹಾನನ ಬಗೆಗೆ ನಾನು ಯೋಚಿಸುವಾಗ, ಗಾಳಿಗೆ ಹಾರುತ್ತಿರುವ ಕೂದಲಿನ ಮತ್ತು ಸೂರ್ಯನ ಪ್ರಖರತೆಗೆ ತನ್ನ ಚರ್ಮವನ್ನು ಒಡ್ಡಿದ ವ್ಯಕ್ತಿಯ ಬಗೆಗೆ ನಾನು ಯೋಚಿಸುತ್ತೇನೆ. ಆತನ ಹೊರಟಾದ ಬಟ್ಟೆಯು ಒಂಟೆಯ ಕೂದಲಿನಿಂದ ಮಾಡಲ್ಪಟ್ಟಿದೆ. ಆತನ ಸೊಂಟದ ಸುತ್ತಲೂ ಅಗಲವಾದ ಚರ್ಮದ ಸೊಂಟದ ಪಟ್ಟಿ ಇದೆ. ಆತನು ಊರಹೊರಗೆ ವಾಸಿಸುತ್ತಾನೆ, ಹಾಗೂ ಜೀವಿಸಲು ಮಿಡತೆ[4] ಮತ್ತು ಕಾಡುಜೇನನ್ನು ಆಹಾರವಾಗಿಸಿಕೊಂಡಿದ್ದಾನೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಆತನು ತನ್ನನ್ನು ತಾನು ನಿರಾಕರಿಸುವಂತವನು ಮತ್ತು ಸ್ವಶಿಸ್ತಿನವನಾಗಿದ್ದನು.

ಇಂಥ ವ್ಯಕ್ತಿಯನ್ನು ಉತ್ಪಾದಿಸುವುದಕ್ಕೆ ಕಾರಣೀಭೂತವಾದ ಅಂಶಗಳು ಯಾವವು? ಒಂದು ಅಂಶವು ಎಂದರೆ *ದೈವಭಕ್ತ ತಂದೆತಾಯಿಗಳು.* ಆತನ ತಂದೆಯು ಯಾಜಕನಾಗಿದ್ದು ಆತನ ಹೆಸರು ಜಕರೀಯ; ತಾಯಿ ಎಲಿಸಬೇತಳು (ಲೂಕ 1:5). "ಅವರಿಬ್ಬರೂ ಕರ್ತನ ಎಲ್ಲಾ ಆಜ್ಞೆಗಳನ್ನೂ ನೇಮನಿಷ್ಟೆಗಳನ್ನೂ ಕೈ ಕೊಂಡ ತಪ್ಪಿಲ್ಲದೆ ನಡಕೊಳ್ಳುತ್ತಾ ದೇವರ ದೃಷ್ಟಿಯಲ್ಲಿ ನೀತಿವಂತರಾಗಿದ್ದರು" ಎಂದು ಲೂಕ 1:6ರಲ್ಲಿ ಅವರ ಜೀವಿತವನ್ನು ಸಾರಾಂಶೀಕರಿಸಲಾಗಿದೆ. ಆ ವಚನದಲ್ಲಿ ಬಲು ಎದ್ದು ಕಾಣುವ ಪದ ಎಂದರೆ "ಇಬ್ಬರೂ" ಎಂದಾಗಿದೆ. ಕೆಲವರು ದೈವಭಕ್ತ ತಾಯಿಯನ್ನ ಹೊಂದುತ್ತಾರೆ ಆದರೆ ತಂದೆ ದೈವಭಕ್ತನಾಗಿರುವುದಿಲ್ಲ. ಇನ್ನೂ ಕೆಲವರು ದೈವಭಕ್ತ ತಂದೆಯನ್ನು ಹೊಂದಿರುತ್ತಾರೆ ಆದರೆ ತಾಯಿ ದೈವಭಕ್ತೆಯಾಗಿ ಇರುವುದಿಲ್ಲ: ಆದರೆ ಯೋಹಾನನ *ಇಬ್ಬರೂ* ಪೋಷಕರು ದೇವರನ್ನು ಪ್ರೀತಿಸುತ್ತಿದ್ದರು ಮತ್ತು ಆತನ ಚಿತ್ತದ ಪ್ರಕಾರ ಜೀವಿಸುತ್ತಿದ್ದರು. ಒಬ್ಬ ಮನುಷ್ಯನು ಅದಕ್ಕಿಂತ ಉನ್ನತವಾದ ಸಂಪ್ರದಾಯವನ್ನು ಹೊಂದಿರಲಿಕ್ಕಿಲ್ಲ.[5]

ಇನ್ನೊಂದು ಅಂಶ *ದೈವೀಯ* ಉದ್ದೇಶ. ಒಂದು ಮಗುವಿಗಾಗ ಅವರು ಎಷ್ಟು ಅಪೇಕ್ಷೆಯುಳ್ಳವರಾಗಿದ್ದರು, ದೇವದೂತನು ಜಕರೀಯನಿಗೆ ಹೇಗೆ ಕಾಣಿಸಿಕೊಂಡನು, ಮತ್ತು ಅಂತಿಮವಾಗಿ ಯೋಹಾನನು ಎಲಿಸಬೇತಳಲ್ಲಿ ಹೇಗೆ ಹುಟ್ಟಿದನು.[6] ಎಂಬ ಜಕರೀಯ ಮತ್ತು ಎಲಿಸಬೇತರ ಕಥೆಯು ನಿಮಗೆ ನೆನಪಿರಬಹುದು. ವೃದ್ಧನಾದ ಯಾಜಕನಿಗೆ ದೇವದೂತನು ಹೇಳಿದ ಮಾತುಗಳ ಮೇಲೆ ನಾನು ಕೇಂದ್ರೀಕರಿಸುತ್ತೇನೆ:

> ಜಕರೀಯಾ, ಭಯಪಡಬೇಡ; ನಿನ್ನ ವಿಜ್ಞಾಪನೆ ದೇವರಿಗೆ ಮುಟ್ಟಿತು; ನಿನ್ನ ಹೆಂಡತಿಯಾದ ಎಲಿಸಬೇತಳು ನಿನಗೆ ಒಬ್ಬ ಮಗನನ್ನು ಹೆರುವಳು. ನೀನು ಅವನಿಗೆ ಯೋಹಾನನೆಂದು ಹೆಸರಿಡಬೇಕು. ನಿನಗೆ ಸಂತೋಷವೂ ಉಲ್ಲಾಸವೂ ಉಂಟಾಗುವದು; ಮತ್ತು ಅವನು ಹುಟ್ಟಿದ್ದಕ್ಕೆ ಬಹುಜನರು ಸಂತೋಷಪಡುವರು. ಅವನು ಕರ್ತನ ದೃಷ್ಟಿಯಲ್ಲಿ ಮಹಾಪುರುಷನಾಗಿರುವನು; ದ್ರಾಕ್ಷಾರಸವನ್ನಾಗಲೀ ಯಾವ ಮದ್ಯವನ್ನಾಗಲೀ ಕುಡಿಯದವನಾಗಿರುವನು; ಅವನು ಹುಟ್ಟಿದಂದಿನಿಂದಲೂ ಪವಿತ್ರಾತ್ಮ ಭರಿತನಾಗಿರುವನು. ಇಸ್ರಾಯೇಲ್ಯರಲ್ಲಿ ಅನೇಕರನ್ನು ಅವರ ದೇವರಾಗಿರುವ ಕರ್ತನ ಕಡೆಗೆ ತಿರುಗಿಸುವನು ಅವನು ಆತನ ಮುಂದೆ ಹೋಗಿ ಎಲೀಯನ ಗುಣಶಕ್ತಿಗಳಿಂದ ಕೂಡಿದವನಾಗಿ ತಂದೆಗಳ ಹೃದಯವನ್ನು ಮಕ್ಕಳ ಕಡೆಗೂ ಹಟಹಿಡಿದವರನ್ನು ನೀತಿವಂತರ ಜ್ಞಾನದ ಕಡೆಗೂ ತಿರುಗಿಸಿ ಸಿದ್ಧವಾದ ಜನವನ್ನು ಕರ್ತನಿಗೆ ಒದಗಿಸುವನು (ಲೂಕ 1:13-17).

ಯೋಹಾನನ ಜೀವಿತದ ಆರಂಭದಿಂದಲೂ, ಆತನು ಯಾರು ಮತ್ತು ಆತನ ಜೀವಿತದ ಉದ್ದೇಶವೇನಾಗಿದೆ ಎಂಬುದರ ಬಗೆಗೆ ಯಾವ ಪ್ರಶ್ನೆಯೂ ಇರಲಿಲ್ಲ. ಅವನ ಅಥವಾ ಅವಳ ಜೀವನದಲ್ಲಿ ದೇವರು ಉದ್ದೇಶವನ್ನು ಹೊಂದಿದ್ದಾನೆ ಎಂದು ಪ್ರತಿಯೊಂದು ಮಗುವಿಗೆ ಅವರ ಪೋಷಕರು ಹೇಳುವದು ಅವಶ್ಯವಿದೆ.

ಮೂರನೆಯ ಅಂಶವು *ದೈವೀಯ* ತರಬೇತಿ ಆಗಿದೆ. ನಮಗೆ ಈ ತರಬೇತಿಯ ಬಗೆಗೆ ಅಲ್ಪವಾಗಿ ಹೇಳಲ್ಪಟ್ಟಿದ್ದು ಜಕರೀಯ ಮತ್ತು ಎಲಿಸಬೇತರು ದೇವದೂತನು ಹೇಳಿದ ಮಗನನ್ನು ಹಂಚಿಕೊಳ್ಳುವದರ ಬಗೆಗೆ ಊಹಿಸಿಕೊಳ್ಳುವದು ಕಷ್ಟಕರವಾಗದಿದ್ದಾಗಲೂ ಕೂಡಾ ಕರ್ತನನ್ನು ಪ್ರೀತಿಸಲು ಮತ್ತು ಆತನಿಗೆ ವಿಧೇಯರಾಗಲು ಪ್ರೋತ್ಸಾಹಿಸುವುದಾಗಿದೆ. ವೇದಭಾಗವು ದಾಖಲಿಸಿದಂತೆ, ಆತನ ಹಿಂದಿನ ಜೀವಿತದ ಈ ವಿರಳವಾದ ವಿವರಗಳು ನಮಗೆ ಕೊಡಲ್ಪಟ್ಟಿವೆ: "ಆ ಬಾಲಕನು ಬೆಳೆದು ಆತ್ಮದಲ್ಲಿ ಬಲವುಳ್ಳವನಾದನು ಮತ್ತು ಇಸ್ರಾಯೇಲ್ ಜನರಿಗೆ ತನ್ನನ್ನು ತೋರ್ಪಡಿಸಿಕೊಳ್ಳುವ ದಿನದವರೆಗೆ ಅರಣ್ಯ ಪ್ರದೇಶದಲ್ಲಿ [ಕಾಡಿನಲ್ಲಿ[7]] ಇದ್ದನು" (ಲೂಕ 1:80). ಯೋಹಾನನು ಮೃತ್ಯು ಸಮುದ್ರದ[8] ಸುತ್ತಲಿನ ಜನರಿಲ್ಲದ ಪ್ರದೇಶಕ್ಕೆ ಯಾವಾಗ ಅಥವಾ ಯಾಕೆ ಹೋದನೆಂದು ನಮಗೆ ತಿಳಿಯದು ಆದರೆ ದೇವರ ಜ್ಞಾನದಲ್ಲಿ, ಅರಣ್ಯವು ಆತನ ತರಬೇತಿಯ ಶಿಬಿರವಾಗಿತ್ತು. ಮೂಲದಿಂದಲೂ, ಗರ್ವದ ಪಟ್ಟಣಗಳಾದ ಸೋದೋಮ್ ಮತ್ತು ಗೋಮೋರ್ ಪಟ್ಟಣಗಳ[9] ಸ್ವೇಚ್ಛಾ ಜೀವನದ ಪರಿಣಾಮವಾಗಿ ಸ್ಪಷ್ಟವಾದ ಉದಾಹರಣೆಯಂತೆ ಒಂದು ಸಾರಿ ಎದ್ದುನಿಂತವು.

ಆ ಧ್ವನಿಯನ್ನು ಇಂದು ನಾವು ಕೇಳುತ್ತಿದ್ದೇವೆಯೇ? ನಾವು ಸ್ವೇಚ್ಛಾಜೀವನದ[10] ಜಗತ್ತಿನಲ್ಲಿ ಜೀವಿಸುತ್ತಿದ್ದೇವೆ ಮತ್ತು ಯೋಹಾನನ ಸಂದೇಶವು ನಮಗೆ ಇಂದು ಅತೀ ಅವಶ್ಯವಾಗಿದೆ. ಏನೇ ಆಗಲಿ "ಯಾವನಿಗಾದರು ನನ್ನ ಹಿಂದೆ ಬರುವುದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬರಲಿ" ಎಂದು ಯೇಸು ಹೇಳಿದ್ದಾನೆ (ಮತ್ತಾಯ 16:24).

ಆತನ ಕಠಿಣ ಜೀವನ ಶೈಲಿಯಿಂದಾಗಿ (ಲೂಕ 7:33), ಯೋಹಾನನು ದೆವ್ವವಿರಬೇಕೆಂದು ಕೆಲವರು ಯೋಚಿಸುತ್ತಾರೆ, ಈ ಎಚ್ಚರಿಕೆಯ ವಾಕ್ಯವನ್ನು ಕೇಳಿರಿ ನಾವು ಸಹ ಸ್ವಂತಕ್ಕಿಂತ ಹೆಚ್ಚಾಗಿ ಇತರರ ಬಗೆಗೆ ಕಾಳಜಿಯನ್ನು ತೋರಿದ್ದಾದರೆ ಭ್ರಾಂತರು ಎಂದು ಜಗತ್ತು ಯೋಚಿಸುವುದಾಗಿದೆ. ಯೇಸು ಅಂಥ ಜೀವಿತದ ಶ್ರೇಷ್ಟತೆಯನ್ನು ಒತ್ತಿ ಹೇಳಿದನು. ಸ್ನಾನಿಕನಾದ ಯೋಹಾನನ ಬಗೆಗೆ ಮಾತನಾಡುತ್ತಾ, ಆತನು ತನ್ನ ಕೇಳುಗರಿಗೆ "ಏನು ನೋಡಬೇಕೆಂದು ಅಲ್ಲಿಗೆ ಹೋಗಿದ್ದೀರಿ? ಗಾಳಿಯಿಂದ ಅಲ್ಲಾಡುವ ದಂಟನ್ನೋ? ಅಲ್ಲವಾದರೆ ಏನು ನೋಡಬೇಕೆಂದು ಹೋಗಿದ್ದೀರಿ? ನಯವಾದ ಉಡುಪನ್ನು ಹಾಕಿಕೊಂಡ ಮನುಷ್ಯನನ್ನೊ? ಶೋಭಾಯಮಾನವಾದ ಉಡುಪನ್ನು ಧರಿಸಿ ಭೋಗದಲ್ಲಿ ಬಾಳುವವರು ಅರಮನೆಗಳಲ್ಲಿ ಇರುತ್ತಾರಷ್ಟೇ!" (ಲೂಕ 7:25). ಯೋಹಾನನಿಗೆ ಸರಳ ಜೀವಿತದಲ್ಲಿ ಯಾವ ಅಭಿರುಚಿಯು ಇರಲಿಲ್ಲ; "ಅರಸರು ತಮ್ಮ ಕೋಟೆಯಲ್ಲಿ ವೈಭವದಿಂದ ಇರಲಿ. ಯೇಸುವು ಸಹ ಅದ್ಭುತವಾದ ಹೇಳಿಕೆಯನ್ನು ಕೊಟ್ಟಿದ್ದಾನೆ!" "ಸ್ತ್ರೀಯರಲ್ಲಿ ಹುಟ್ಟಿದವರೊಳಗೆ ಯೋಹಾನನಿಗಿಂತಲೂ ದೊಡ್ಡವನೂ ಒಬ್ಬನು ಇಲ್ಲ" (ಲೂಕ 7:28). ಅರಣ್ಯದಲ್ಲಿ ಕೂಗುವ ಧ್ವನಿಗೆ ಎಂಥಾ ಪ್ರಶಂಸೆ ಇದು!

ನಮ್ಮಲ್ಲಿ ಪ್ರತಿಯೊಬ್ಬರೂ ನಮ್ಮನ್ನು ಯೋಹಾನನೊಡನೆ ಹೋಲಿಸಿಕೊಳ್ಳುವಾ ಮತ್ತು "*ನಾವು* ಸ್ವಶಿಸ್ತಿನ ಜೀವಿತದಲ್ಲಿ ಮತ್ತು ಸ್ವನಿರಾಕರಣೆಯಲ್ಲಿ ಜೀವಿಸುತ್ತಿದ್ದೇವೆಯಾ?" ಎಂದು ಕೇಳಿಕೊಳ್ಳುವಾ.

## ಅಲ್ಪದರಲ್ಲಿ ಸಂತೃಪ್ತಿಪಡುವ ಅರಣ್ಯದಲ್ಲಿ

## "ನಿನ್ನ ಮಾರ್ಗವನ್ನು ಬದಲಾಯಿಸು" ಎಂದು ಕೂಗುವ ಧ್ವನಿ

"ಸಮಯದ ಪರಿಪೂರ್ಣತೆಯಲ್ಲಿ"[11] "ಜಕರೀಯನ ಮಗನಾದ ಯೋಹಾನನಿಗೆ ಅಡವಿಯಲ್ಲಿ ದೇವರ ವಾಕ್ಯವುಂಟಾಯಿತು" (ಲೂಕ 3:2). ಪಿಸ್ತೂಲಿನ ಸದ್ದಿನಿಂದ ಆರಂಭವಾಗುವ ಆಟಗಾರನ ಹಾಗೆ, ಗಂಟೆಯ ಸದ್ದಾದೊಡನೆಯೇ ಒಬ್ಬ ಕುಸ್ತಿಪಟು ಬುಲ್‌ಡಾಗ್

ಮೇಲೆ ಎರಗುವ ಹಾಗೆ ಯೋಹಾನನ ಜೀವಿತದಲ್ಲಿ ದೇವರ ವಾಕ್ಯವು ಇತ್ತು.[12]

ಯೋಹಾನನು ತಕ್ಷಣವೇ ಬೋಧಿಸಲು ಆರಂಭಿಸಿದನು, "ಆ ದಿನಗಳಲ್ಲಿ ಸ್ನಾನಿಕನಾದ ಯೋಹಾನನು ಪರಲೋಕ ರಾಜ್ಯವು ಸಮೀಪವಾಯಿತು; ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು ಯೂದಾಯದ ಅಡವಿಯಲ್ಲಿ ಸಾರಿ ಹೇಳುತ್ತಾ ಬಂದನು" (ಮತ್ತಾಯ 3:1, 2). ಬರಲಿರುವ ಮೆಸ್ಸೀಯನಿಗಾಗಿ ಮತ್ತು ದೇವರ ರಾಜ್ಯಕ್ಕಾಗಿ ಜನರನ್ನು ಸಿದ್ಧಮಾಡುವುದೇ ಆತನ ಕಾರ್ಯವಾಗಿತ್ತು. ಬೋಧಕನು ಅವರ ಜೀವಿತವನ್ನು ತಗ್ಗಿಸಿಕೊಳ್ಳುವದು ಅವರಿಗೆ ಅವಶ್ಯವಿದೆ ಎಂದು ತನ್ನ ಕೇಳುಗರಿಗೆ ಹೇಳುವುದರಲ್ಲಿ ಎಲ್ಲಿಯೂ ಕತ್ತರಿಸಲಿಲ್ಲ:

> ಹೀಗಿರಲಾಗಿ ಅವನು ತನ್ನಿಂದ ದೀಕ್ಷಾಸ್ನಾನಮಾಡಿಸಿಕೊಳ್ಳುವದಕ್ಕಾಗಿ ಹೊರಟುಬಂದ ಜನರ ಗುಂಪುಗಳಿಗೆ - ಎಲೈ ಸರ್ಪಜಾತಿಯವರೇ, ಮುಂದೆಕಾಣಬರುವ ದೈವಕೋಪ ದಿಂದ ತಪ್ಪಿಸಿಕೊಳ್ಳುವುದಕ್ಕೆ ನಿಮಗೂ ಉಪದೇಶ ಮಾಡಿದವರಾರು? ಹಾಗಾದರೆ ನಿಮ್ಮ ಮನಸ್ಸು ದೇವರಕಡೆಗೆ ತಿರುಗಿತೆಂಬುದನ್ನು ತಕ್ಕಫಲಗಳಿಂದ ತೋರಿಸಿರಿ. ಅಬ್ರಹಾಮನು ನಮಗೆ ಮೂಲ ಪುರುಷನಲ್ಲವೇ ಎಂದು ನಿಮ್ಮೊಳಗೆ ಅಂದುಕೊಳ್ಳುವವರಾಗಬೇಡಿರಿ ದೇವರು ಅಬ್ರಹಾಮನಿಗೆ ಈ ಕಲ್ಲುಗಳಿಂದಲೂ ಮಕ್ಕಳನ್ನು ಹುಟ್ಟಿಸಬಲ್ಲನೆಂದು ನಿಮಗೆ ಹೇಳುತ್ತೇನೆ (ಲೂಕ 3:7, 8).

ಅವರು ಯೆಹೂದಿಗಳಾಗಿದ್ದುದರಿಂದ ದೇವರು ಅವರನ್ನು ಒಪ್ಪಿಕೊಳ್ಳುವನು ಎಂದು ಬಹುದಿನಗಳಿಂದಲೂ ಜನರು ಯೋಚಿಸುವವರಾಗಿದ್ದರು. ಯೋಹಾನನ ಸಂದೇಶವು ಎಚ್ಚರಿಕೆಯ ಗಂಟೆಯ ಸಂದೇಶವಾಗಿತ್ತು - ಅವರನ್ನು ಎಚ್ಚರಿಸುವುದಕ್ಕೆ ರೂಪಿತವಾದುದ್ದೂ ಆಗಿತ್ತು! ಆತನು ಅವರಿಗೆ ಅವರ ಜೀವಿತದಲ್ಲಿ ಯಾವುದೇ ಮಹತ್ವದ ಬದಲಾವಣೆಯನ್ನು ತಾರದೇ ಹೋದರೆ, ಅವರಿಗೆ "ದೇವರ ರಾಜ್ಯದಲ್ಲಿ ಹಕ್ಕಿಲ್ಲ" ಎಂದು ಅವರಿಗೆ ಹೇಳಿದನು (ನೋಡಿ ಲೂಕ 9:62).

> ಹಾಗಾದರೆ ನಾವೇನು ಮಾಡಬೇಕು ಎಂದು ಅವನನ್ನು ಕೇಳಿದ್ದಕ್ಕೆ ಅವನು - ಎರಡು ಅಂಗಿಗಳುಳ್ಳವನು ಇಲ್ಲದವನಿಗೆ ಒಂದು ಕೊಡಲಿ, ಆಹಾರವುಳ್ಳವನು ಇಲ್ಲದವನಿಗೆ ಕೊಡಲಿ ಎಂದು ಅವರಿಗೆ ಹೇಳಿದನು. ಸುಂಕದವರು ಸಹ ದೀಕ್ಷಾಸ್ನಾನ ಮಾಡಿಸ್ನಾನ ಮಾಡಿಸಿಕೊಳ್ಳಬೇಕೆಂದು ಬಂದು ಗುರುವೇ ನಾವೇನು ಮಾಡಬೇಕು ಎಂದು ಅವನನ್ನು ಕೇಳಲು ಅವನು, "ನೇಮಿಸಿದ ಹಾಸಲಿಗಿಂತ ಹೆಚ್ಚಾಗಿ ಏನೂ ಎಳಕೊಳ್ಳ ಬೇಡಿರಿ" ಎಂದು ಅವರಿಗೆ ಹೇಳಿದನು. ಸಿಪಾಯಿಗಳು ಸಹ ಬಂದು "ನಾವು ಏನು ಮಾಡಬೇಕು" ಎಂದು ಅವನನ್ನು ಕೇಳಿ ದಾಗ ಅವನು ಅವರಿಗೆ "ಯಾರನ್ನಾದರೂ ಬೆದರಿಸ ಬೇಡಿರಿ; ಯಾರ ಮೇಲಾದರೂ ಸುಳ್ಳುದೂರು ತಂದು ದುಡ್ಡು ಕಸಕೊಳ್ಳಬೇಡಿರಿ; ನಿಮ್ಮ ಸಂಬಳದಲ್ಲಿ ತೃಪ್ತರಾಗಿರಿ" ಎಂದು ಹೇಳಿದನು (ಲೂಕ 3:10-14).[13]

ನಿಷ್ಕಪಟವಾದ ಬೋಧನೆಯ ಇಂದು ನಮಗೆ ಇನ್ನೂ ಅವಶ್ಯವಿದೆ. ನಮ್ಮನ್ನು ಎಚ್ಚರಿಸುವ ಮತ್ತು ಪರಲೋಕಕ್ಕಾಗಿ ನಮ್ಮನ್ನು ಸಿದ್ಧರನ್ನಾಗಿಸುವ ಬೋಧನೆಯು ನಮಗೆ ಅವಶ್ಯವಿದೆ. ಸಾಮಾನ್ಯ ಪದದಲ್ಲಿ ಪಾಪಿಯೊಬ್ಬ ಎಂದಿಗೂ ತನ್ನ ಪಾಪದ ಬಗ್ಗೆ ಮನವರಿಕೆ ಮಾಡದಿದ್ದಲ್ಲಿ ಆ ರೀತಿಯಲ್ಲಿ ಪಾಪವನ್ನು ಖಂಡಿಸುವದು ಸಾಧ್ಯವಾಗುವುದಾಗಿದೆ. ಯೋಹಾನನ ಬೋಧನೆಯು ಸೂಚ್ಯವಾದದ್ದು ಮತ್ತು ಪ್ರಾಯೋಗಿಕವಾದ್ದು ಆಗಿದೆ.

"ಇನ್ನು ಬೇರೆ ಅನೇಕ ಮಾತುಗಳಿಂದ ಅವನು [ಯೋಹಾನನ] ಇಸ್ರಾಯೇಲ್ ಜನರಿಗೆ ಬುದ್ಧಿಹೇಳಿ ಸುವಾರ್ತೆಯನ್ನು ಸಾರುತ್ತಿದ್ದನು" ಎಂದು ಲೂಕ 3:18 ಹೇಳುತ್ತದೆ. ಸುವಾರ್ತೆ ಪದದ ಅರ್ಥವು "ಒಳ್ಳೆಯ ವಾರ್ತೆ"ಯಾಗಿದೆ. ಸುವಾರ್ತೆಯು ಜನರಿಗೆ ಸ್ವಾರ್ಥಿಯಾಗದಿರಿ, ಅಪ್ರಮಾಣಿಕರಾಗದಿರಿ, ಮತ್ತು ತಮ್ಮ ಅಧಿಕಾರವನ್ನು ತೆಳದಿರುವಂತೆ ಯಾವ ಅರ್ಥದಲ್ಲಿ

ಹೇಳುವುದಾಗಿದೆ? ಇದು "ಸುವಾರ್ತೆ"ಯಾಗಿತ್ತು. ಯಾಕೆಂದರೆ ಇದು ಅವರ ಅಲ್ಪತೃಪ್ತಿಯನ್ನು ನಾಶಮಾಡುವುದಾಗಿದೆ, ಅವರ ಜೀವಿತವನ್ನು ಪುನರ್ ಪರೀಕ್ಷೆಗೆ ಒತ್ತಾಯಿಸುವುದಾಗಿದೆ, ಮತ್ತು ದೇವರು ತನ್ನ ಕೃಪೆಯನ್ನು ತಮ್ಮ ಮೇಲೆ ತೋರುವಂತಹ ಜನರನ್ನು ಪ್ರೋತ್ಸಾಹಿಸುವುದಾಗಿದೆ!

"ಪ್ರೀತಿಯಲ್ಲಿ [ಸಂಪೂರ್ಣ ಸತ್ಯ]ದ" ಬಗೆಗೆ ಮಾತನಾಡುವಂತವರನ್ನು ನಾವು ಶ್ಲಾಘಿಸುವವರಾಗಿದ್ದೇವೆಯೇ (ಎಫೆಸ 4:15; ನೋಡಿ ಗಲಾತ್ಯ 4:16)? ನಾನು ಹಾಗೆ ಆಶಿಸುವವನಾಗಿದ್ದೇನೆ. ನಾವು ಅಂಜುಗುಳಿ ಬೋಧಕರಾಗಿರುವುದಕ್ಕಿಂತಲೂ ಅಂಜುಬುರಕ ಶಸ್ತ್ರಚಿಕಿತ್ಸಕನಾಗಿರಲು ಬಯಸುವವನಾಗಿದ್ದೇನೆ. ಆ ಸಂದೇಶವು ಎಲ್ಲಿ ಅವಶ್ಯವಿದೆಯೋ ಅಲ್ಲಿ "ನಿಮ್ಮ ಮಾರ್ಗಗಳನ್ನು ಬದಲಾಯಿಸು" ಎಂದು ಕೂಗುವ ಧ್ವನಿಯಾಗಿ ಇರಲು ನಾವು ಬಯಸುವವರಾಗಿದ್ದೇವೆ ಎಂದು ಸಹ ನಾನು ಆಶಿಸುವವನಾಗಿದ್ದೇನೆ (ನೋಡಿರಿ ಗಲಾತ್ಯ 6:1; ಯಾಕೋಬ 5:19, 20).

## ಸಂಶಯದ ಅರಣ್ಯದಲ್ಲಿ "ನಂಬು" ಎಂದು ಕೂಗುವ ಧ್ವನಿ

ಒಂದು ದಿನ ಯೋಹಾನನು ಯೊರ್ದಾನಿನ ಆಚೆ ಬೋಧಿಸುತ್ತಿದಂತೆಯೇ ಯೇಸು ಆತನೆಡೆಗೆ ದೀಕ್ಷಾಸ್ನಾನಮಾಡಿಸಿಕೊಳ್ಳಲು ಬಂದನು. ಯೇಸುವಿಗೆ ದೀಕ್ಷಾಸ್ನಾನಕೊಡಲು ಯೋಹಾನನು ಹೇಗೋ ನಿರಾಕರಿಸಿದನು, ಆದರೆ ಆತನು (ಯೇಸು) ಆತನನ್ನು (ಯೋಹಾನನ್ನು) ಸಮಾಜಾಯಿಸಿದನು, ಮತ್ತು ನಂತರ ದೀಕ್ಷಸ್ನಾನ ಹೊಂದಿದನು, ಆಕಾಶದಿಂದ ದೇವರು ಮಾತನಾಡಿದನ್ನು ಮತ್ತು ಪರಿಶುದ್ಧಾತ್ಮನು ಪಾರಿವಾಳದ ರೂಪದಲ್ಲಿ ಇಳಿದುಬಂದಿದ್ದು ಈ ಕಥೆಯನ್ನು ಬಹುಶಃ ನೀನು ತಿಳಿದಿರಬಹುದು (ಮತ್ತಾಯ 3:13-17).[14]

ಈ ಪ್ರಕಟನೆಗಳು ತಾನು ಯಾರಿಗಾಗಿ ಮಾರ್ಗವನ್ನು ಸಿದ್ಧಮಾಡುತ್ತಿದ್ದನೋ ನಿಶ್ಚಯವಾಗಿ ಆತನೇ ಯೇಸು ಮೆಸ್ಸೀಯನು ಎಂದು ಯೋಹಾನನು ಮನದಲ್ಲಿ ದೃಢಿಕರಿಸಿದನು! ಆ ಕ್ಷಣದಿಂದ ಯೋಹಾನನ ಪ್ರಿಯವಾದ ಸಂದೇಶವೂ "ಇಗೋ ಯಜ್ಞಕ್ಕೆ ದೇವರು ನೇಮಿಸಿ ಕುರಿ" ಎಂಬುದಾಗಿತ್ತು!

> ಮರು ದಿನ ಯೋಹಾನನು ತನ್ನ ಕಡೆಗೆ ಬರುವ ಯೇಸುವನ್ನು ನೋಡಿ ಅಗೋ (ಯಜ್ಞಕ್ಕೆ) ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು (ಯೋಹಾನ 1:29).

> ಮರು ದಿನ ತಿರುಗಿ ಯೋಹಾನನೂ ಅವನ ಶಿಷ್ಯರಲ್ಲಿ ಇಬ್ಬರು ನಿಂತುಕೊಂಡಿದ್ದಾಗ ಯೋಹಾನನು ಅಲ್ಲಿ ತಿರುಗಾಡುತ್ತಿದ್ದ ಯೇಸುವನ್ನು ನೋಡಿ ಅಗೋ ಯಜ್ಞಕ್ಕೆ ದೇವರು ನೇಮಿಸಿದ ಕುರಿ ಅಂದನು (ಯೋಹಾನ 1:35, 36).

ಯೇಸು ಕೇವಲ ಒಳ್ಳೆಯ ಮನುಷ್ಯನು ಒಳ್ಳೆಯ ಬೋಧಕನು ಮಾತ್ರವೇ ಎಂದು ಯೋಹಾನನು ಹೇಳಲಿಲ್ಲ; ಆತನು ನಮ್ಮ ಪಾಪಗಳಿಗೆ ಬಲಿಯಾಗಲಿದ್ದಾನೆ, ಆತನ ಮೂಲಕ ಮಾತ್ರವೇ ನಾವೆಲ್ಲರೂ ರಕ್ಷಿಸಲ್ಪಡುವೆವು ಎಂದು ಘೋಷಿಸಿದನು.

ಅವಿಶ್ವಾಸ ಮತ್ತು ಧರ್ಮವಿರೋಧಿತ್ವದ ಜಗತ್ತಿನಲ್ಲಿ, ಯೋಹಾನನ ಕಹಳೆಯನ್ನು ಕೇಳುವದು ಇನ್ನೂ ಅವಶ್ಯವಿದೆ. ಯೇಸು ದೇವಕುಮಾರನು! ಆತನೊಬ್ಬನೇ ಮಾನವನ ನಿರೀಕ್ಷೆಯಾಗಿದ್ದಾನೆ! ಇದನ್ನು ನಾವು ಯೋಹಾನನು ಹೊಂದಿದಂತಹ ಮನವರಿಕೆಯಿಂದ ನಾವೂ ಬೋಧಿಸುವಾ!

## ಗರ್ವದ ಅರಣ್ಯದಲ್ಲಿ "ನಮ್ರನಾಗಿರು" ಎಂದು ಕೂಗುವ ಧ್ವನಿ

ಯೇಸುವಿನ ದೀಕ್ಷಾಸ್ನಾನವು ಯೋಹಾನನ ಸೇವೆಯ ಪರಾಕಾಷ್ಟತೆಯಾಗಿತ್ತು. ಆ ಒಂದು ಸಂಗತಿಯಲ್ಲಿ, ಆತನ ಕಾರ್ಯವು ಮೂಲತವಾಗಿ ಮುಗಿದಿತ್ತು, ಮತ್ತು ಆತನ ಸೇವೆಯು ಕ್ಷಿಣಿಸುತ್ತಾ ಬಂದಿತ್ತು. ಮೆಸ್ಸೀಯನ ಮುಂದೂತನಾದಂತಹ, ಯೋಹಾನನು ಮಾಲತಃ ಮೂರು ಜವಾಬ್ದಾರಿಗಳನ್ನು ಹೊಂದಿದ್ದನು: ಮೆಸ್ಸೀಯನಿಗಾಗಿ ಮಾರ್ಗವನ್ನು ಸರಿ ಮಾಡುವದು, ಮೆಸ್ಸಿಯನಿಗಾಗಿ ಮಾರ್ಗವನ್ನು ಸಿದ್ಧಮಾಡುವದು, ಮತ್ತು ಮೆಸ್ಸಿಯನ ಮಾರ್ಗದಿಂದ ಹೊರಕ್ಕೆ ಬರುವದು![15] ಅದು ಯೋಹಾನನಿಗೆ ಸರಿಯಾಗಿತ್ತು; ಆತನ ದೇವರು ಆತನಿಗಾಗಿ ಮಾಡಿದ ಯಾವುದೇ ಯೋಜನೆಯನ್ನೂ ಸಂಪೂರ್ಣಗೊಳಿಸಲು ಆತನು ಸಿದ್ಧನಿದ್ದನು.

ನನ್ನೊಂದಿಗೆ ಯೋಹಾನ 3ರೊಂದಿಗೆ ಸಾಗುವಾಗ, ಇದು ಯೋಹಾನನ ನೈಜ್ಯ ಶ್ರೇಷ್ಟತೆಗೆ, ಸಂಕೇತದಂತಿದೆ. ಯೇಸುವಿನ ಜನಪ್ರಿಯತೆಯು ಗಗನಕ್ಕೇರಲು ಆರಂಭಿಸಿದಂತೆ, ಯೋಹಾನನ ಶಿಷ್ಯರು ಆತನೆಡೆಗೆ ಬಂದು "ಗುರುವೇ ಯೊರ್ದಾನ್ ಹೊಳೆಯ ಆಚೆ ನಿನ್ನ ಬಳಿಯಲ್ಲಿದ್ದ ಒಬ್ಬನ ವಿಷಯದಲ್ಲಿ ನೀನು ಸಾಕ್ಷಿಕೊಟ್ಟೆಯಲ್ಲಾ; ಅವನೂ ಸ್ನಾನ ಮಾಡಿಸುತ್ತಾನೆ, ಅವನ ಬಳಿಗೆ ಎಲ್ಲರೂ ಹೋಗುತ್ತಾರೆ" (ವಚನ 26) ಎಂದು ಹೇಳಿದರು. ಅವರ ಹೊಟ್ಟೆಕಿಚ್ಚಿನ ಮಾತನ್ನು ನೀನು ಕೇಳಬಲ್ಲೆಯಾ? ಅವರಲ್ಲಿನ "ಪ್ರತಿಯೊಬ್ಬರೂ ಮೊದಲು ನಮ್ಮ ಬಳಿ ಬರುತ್ತಿದ್ದರು, ಆದರೆ ಈಗ ಆತನೆಡೆಗೆ ಹೋಗುತ್ತಿದ್ದಾರೆ. ನಾವು ಕೇಂದ್ರಸ್ಥಾನದಲ್ಲಿದ್ದೆವು. ಆದರೆ ಈಗ ಲಕ್ಷಣವು ಆತನ ಮೇಲೆ ಹರಿದಿದೆ. *ನೀನು* ಅವನನ್ನು ದೀಕ್ಷಾಸ್ನಾನಮಾಡಿಸಿದೆ; ಆತನನ್ನು ಶ್ರೇಷ್ಟನನ್ನಾಗಿ ಮಾಡಿಸಿದ್ದು *ನೀನು* ಎಂದು ಅವರು ತಿಳಿಯರೋ?" ಎಂದು ಅವರು ಹೇಳಿದರು.

ಸೇನಾಪತಿಗಳಲ್ಲಿರುವ ಹೊಟ್ಟೆಕಿಚ್ಚಿನಿಂದ ಯುದ್ಧದಲ್ಲಿ ಅನೇಕರು ಅಪಜಯ ಹೊಂದಿದರು. ಆತನ ಶಿಷ್ಯರ ಅಸೂಯೆಯು ಯೋಹಾನನಿಂದ ಪ್ರೋತ್ಸಾಹಿಸಲ್ಪಟ್ಟಿದ್ದಾದರೆ, ಅದರ ಹಾನಿಯ ಬಗೆಗೆ ಯೋಚಿಸಿರಿ, ಇದು ಯೇಸುವಿಗಾಗಿ ಅನಿವಾರ್ಯದ ಕ್ಷಣಗಳಾಗುತ್ತಿದ್ದವು. ಈ ದೂರಿಗೆ ಸ್ನಾನಿಕನಾದ ಯೋಹಾನನ ಪ್ರತಿಕ್ರಿಯೆಯು ಕೇಳುವುದಕ್ಕೆ ಆಶ್ಚರ್ಯಪಡುವದೂ ಆಗಿತ್ತು. ಯೇಸುವಿನ ಯಶಸ್ಸು ದೇವರ ಚಿತ್ತವೇ ಎಂದು ಆತನು ಮೊದಲು ಹೇಳಿದನು: "ಪರಲೋಕ ದಿಂದ ಅನುಗ್ರಹಿಸೋಣವಾದದ್ದನ್ನೇ ಹೊರತು ಮನುಷ್ಯನು ಹೆಚ್ಚೇನೂ ಹೊಂದಲಾರನು" (ವಚನ 27). ನಂತರ ಆತನು ಯಾವ ಸಂಭವಿಸುವಿಕೆಯು ಆತನನ್ನು ಯಾವದು ಸಂತೋಷ ಗೊಳಿಸುವದು ಎಂದು ಹೇಳಿದನು:

> ನಾನು ಕ್ರಿಸ್ತನಲ್ಲ, ಆತನ ಮುಂದೆ ಕಳುಹಿಸಲ್ಪಟ್ಟವನಾಗಿದ್ದೇನೆ ಎಂದು ನಾನು ಹೇಳಿದ್ದಕ್ಕೆ ನೀವೇ ಸಾಕ್ಷಿ. ಮದಲಗಿತ್ತಿಯುಳ್ಳವನೇ ಮದಲಿಂಗನು; ಆದರೆ ಮದಲಿಂಗನ ಗೆಳೆಯನು ಅವನ ಹತ್ತಿರ ನಿಂತುಕೊಂಡು ಅವನ ಮಾತುಗಳನ್ನು ಕೇಳಿ ಮದಲಿಂಗನ ಧ್ವನಿಗೆ ಬಹು ಸಂತೋಷಿಸುತ್ತಾನಲ್ಲವೇ. ಇದರಂತೆ ನನಗಿರುವ ಸಂತೋಷ; ಅದು ನೆರವೇರಿತು (ವಚನಗಳು 28, 29).

ಅಂತಿಮವಾಗಿ ಆತನು: "ಆತನು ವೃದ್ಧಿಯಾಗಬೇಕು; ನಾನು ಕಡಿಮೆಯಾಗಬೇಕು" (ವಚನ 30) ಎಂಬ ಗುರುತರವಾದಈ ಮಾತುಗಳನ್ನು ಆಡಿದನು. ಆ ರೀತಿ ಇರುವಂತಹ ಮತ್ತು ಅರ್ಥಕೊಡುವ ಪದಗಳನ್ನು ದೊಡ್ಡ ದೊಡ್ಡ ಮನುಷ್ಯರು ತೆಗೆದುಕೊಳ್ಳುವಂತವು ಆಗಿವೆ!

ಹೆಚ್ಚಾದ ಯಶಸ್ವಿ ಬೋಧಕರು ಯೋಹಾನನ ಈ ಸಂಧಿಗ್ಧತೆಯೊಡನೆ ಹೋರಾಡುವವರಾಗಿದ್ದಾರೆ. ಅವರು ಅದನ್ನು ಒಪ್ಪಿಕೊಳ್ಳಲಿ ಅಥವಾ ಇಲ್ಲದಿರಲಿ ಅವರು ಆ ಶ್ಲಾಘನೆಯಲ್ಲಿ ಸಂತೋಷಿಸುವವರಾಗಿದ್ದರು. ನಿಯಮದಂತೆ ಹೇಗೋ, ಗೌರವಾನ್ವಿತ ಬೋಧಕರು

ವಯಸ್ಸಾದಂತೆ ಬೋಧನೆ ಮಾಡಲು ಅವರಿಗೆ ಕೆಲವೇ ಕರೆಗಳು ಬರುತ್ತವೆ ಮತ್ತು ಅವರ ದೃಷ್ಟಿಯು ಯೌವನಸ್ಥ ಬೋಧಕರತ್ತವಾಗುತ್ತದೆ. "ಅದು ಒಳ್ಳೆಯದು ಅವರು ಬೆಳೆಯಬೇಕು ಮತ್ತು ನಾವು ಕಡಿಮೆಯಾಗಬೇಕು. ನನ್ನ ದೇವರು ಅವರೊಂದಿಗಿರಲಿ" ಎಂದು ಹೇಳುವುದು ಎಷ್ಟು ಕಷ್ಟಕರವಾದದ್ದು!

ತಮ್ಮ ಅಹಂದೊಂದಿಗೆ ಹೋರಾಡುವವರು ಬೋಧಕರು ಮಾತ್ರ ಅಷ್ಟೆ ಅಲ್ಲ. ಇತರರು ಹೊಗಳಿಕೆಯನ್ನ ಪಡೆದಾಗ ನಾವೂ ಸಹ ಹೊಂದಬೇಕು ಎಂದೆನಿಸದೇ? ಇತರರು ಒಳ್ಳೆಯ ಕೆಲಸ ಅಥವಾ ಮುಂಬಡ್ತಿಯನ್ನು ಪಡೆದಿದ್ದಾದರೆ? ನಾವು ಪ್ರಾಮಾಣಿಕವಾಗಿ ಅವರಿಗಾಗಿ ಸಂತೋಷಪಟ್ಟಿದ್ದಿದೆಯೇ? ನಾವು ಪ್ರಾಮಾಣಿಕವಾಗಿ "ಅವರು ಬೆಳೆಯಬೇಕು ಮತ್ತು ನಾವು ಕಡಿಮೆಯಾಗಬೇಕು" ಎಂದು ಹೇಳಬಹುದೇ?

ನಮ್ಮಲ್ಲಿ ಕೆಲವರಿಗೆ, ಇದಕ್ಕಿಂತ ದೊಡ್ಡ ಸವಾಲು ಮತ್ತೊಂದಿಲ್ಲ. "ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ, ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ" (ಯಾಕೋಬ 4:6) ಎಂಬುದನ್ನು ನೆನಪಿಡಿರಿ. ಅಹಂಕಾರದ ಜಗತ್ತಿನಲ್ಲಿ "ನಮ್ರನಾಗಿರು" ಎಂದು ಕೂಗಿದ ಯೋಹಾನನಂತೆ ನಮ್ಮಲ್ಲಿ ಕೂಡ ಹೆಚ್ಚಾದವರು ಉಂಟಾಗಲು ದೇವರು ಸಹಾಯಿಸಲಿ.[16]

## ಹೇಡಿತನದ ಅರಣ್ಯದಲ್ಲಿ "ಧೈರ್ಯವಂತನಾಗಿರು" ಎಂದು ಕೂಗುವ ಧ್ವನಿ

ಯೋಹಾನನ ಜೀವಿತದಲ್ಲಿ ಇನ್ನಿತರ ಘಟನೆಗಳು ಕೂಡಾ ಅಧ್ಯಯನಿಸಲ್ಪಟ್ಟಿವೆ,[17] ಆದರೆ ಆತನ ಜೀವಿತದ ಕೊನೆಯ ಅಂಕಣಕ್ಕೆ ಮಾತು ಮುಗಿಸೋಣ. ನಾವು ಹಿಂದೆ ಆತನ ಬೋಧನೆಯನ್ನು ಸೂಚಿತವಾದಲ್ಲಿ ಮತ್ತು ಪ್ರಾಯೋಗಿಕವಾದಲ್ಲಿ ಪ್ರಾರಂಭಿಸಿದ್ದೆವು. ಅರಸನಾದ ಹೆರೋದನು ಆತನು ಕೊಡಮಾಡಿದ ದೋಷಾರೋಪಣೆಗೆ ಇಲ್ಲಿ ಕೊಡಲ್ಪಟ್ಟ ಇದಕ್ಕಿಂತ ಉತ್ತಮವಾದ ನಿದರ್ಶನವು ಮತ್ತೊಂದಿಲ್ಲ.

> ಆದರೆ ಉಪರಾಜನಾದ ಹೆರೋದನು ತನ್ನ ಅಣ್ಣನ ಹೆಂಡತಿಯಾದ ಹೆರೋದ್ಯಳ ನಿಮಿತ್ತವಾಗಿಯೂ ತಾನು ಮಾಡಿದ್ದ ಎಲ್ಲಾ ದುಷ್ಕೃತ್ಯಗಳ ನಿಮಿತ್ತವಾಗಿಯೂ ಯೋಹಾನನಿಂದ ಗದರಿಸಲ್ಪಟ್ಟವನಾದನು (ಲೂಕ 3:19).
>
> ಹೆರೋದನು ಹೆರೋದ್ಯಳ ನಿಮಿತ್ತ ಯೋಹಾನನನ್ನು ಹಿಡಿದು ಕಟ್ಟಿಸಿ ಸೆರೆಯಲ್ಲಿ ಹಾಕಿಸಿದ್ದನು. ಆ ಹೆರೋದ್ಯಳ ಹೆರೋದನ ಅಣ್ಣನಾದ ಫಿಲಿಪ್ಪನ ಹೆಂಡತಿ. ಯೋಹಾನನು ಹೆರೋದನಿಗೆ ನೀನು ಇವಳನ್ನು ಇಟ್ಟುಕೊಂಡಿರುವದು ಧರ್ಮವಲ್ಲವೆಂದು ಹೇಳುತ್ತಿದ್ದನು (ಮತ್ತಾಯ 14:3, 4).

ಯೋಹಾನ ಮತ್ತು ಹೆರೋದನ ಮಧ್ಯೆ ಸಂಘರ್ಷವು ಹೇಗೆ ಬೆಳೆಯಿತು ಎಂಬುದನ್ನು ನಾವು ನೋಡಿದೆವು. ಹೆರೋದನು ಯೋಹಾನನ ಬೋಧನೆಯನ್ನು ಕೇಳಲು ಬಂದಿದ್ದನೇ?[18] (ಆತನ ಬೇಹುಗಾರರು ಜನಸಂದಣಿಯ ಮಧ್ಯದಲ್ಲಿ ಕುಳಿತು ಯೋಹಾನನ ಮಾತನ್ನು ಕೇಳುವುದನ್ನು ನಾನು ಊಹಿಸಿಕೊಳ್ಳುತ್ತೇನೆ.) ಯೋಹಾನನು ಹೆರೋದನ ಯಾವುದೇ ಒಂದು ಕೋಟೆಗೆ ಭೇಟಿ ಇಟ್ಟಿದ್ದನೇ? (ಹೆರೋದನ ಅರಮನೆಯಲ್ಲಿ ಹೊಳೆಯುವ ಕಣ್ಣಿನಿಂದ ತನ್ನ ಸಂದೇಶವನ್ನು ಕೊಡುವುದಕ್ಕಾಗಿ ಒಬ್ಬ ಬೋಧಕನು ನಿಂತುಕೊಂಡಿರುವುದನ್ನು ನಾನು ಊಹಿಸಿಕೊಳ್ಳುವವನಾಗಿದ್ದೇನೆ.) ನಮಗೆ ವಿವರಗಳು ಕೊಡಲ್ಪಟ್ಟಿಲ್ಲ, ಆದರೆ ಹೆರೋದನು ಅವಳನ್ನು (ಹೆರೋದ್ಯಳನ್ನು) ಇಟ್ಟುಕೊಂಡಿರುವದು ಧರ್ಮವಲ್ಲವೆಂದು ಯೋಹಾನನು *ನಿರಂತರವಾಗಿ* ಹೇಳಿದನು ಎಂದು ಗ್ರೀಕ್ ವೇದಭಾಗವು ಸೂಚಿಸುವುದಾಗಿದೆ.

ಇದಕ್ಕೆ ಧೈರ್ಯವು ಬೇಕು, ಬಲವಾದ ಧೈರ್ಯಬೇಕು! ಇದು ಧೈರ್ಯವನ್ನು ಒಳಗೊಂಡಿದೆ

ಯಾಕೆಂದರೆ ಹೆರೋದನು ಮಹತ್ವ ಪೂರ್ಣವಾದ ವ್ಯಕ್ತಿ. ಪ್ರಭಾವಶಾಲಿಯಾದ ವ್ಯಕ್ತಿ. ಇದು ಧೈರ್ಯವನ್ನು ಒಳಗೊಂಡಿದ್ದಾಗಿದೆ ಯಾಕೆಂದರೆ ಯೋಹಾನನು ವೈಯಕ್ತಿಕವಾದ ಗದರಿಕೆಯನ್ನು ಮಾಡುತ್ತಿದ್ದಾನೆ. ಪಾಪವನ್ನು ಸಾಮಾನ್ಯ ರೀತಿಯಲ್ಲಿ ಪೀಠದ ಸುರಕ್ಷತೆಗಾಗಿ ಮತ್ತು ಮತ್ತೊಬ್ಬನು "ನೀನು ದೋಷಿಯಾಗಿದ್ದಿ" ಎಂದು ಇನ್ನೊಬ್ಬನಿಗೆ ಹೇಳುವಂತೆ ಖಂಡಿಸುವ ಒಂದು ಸಂಗತಿಯಾಗಿದೆ.[19] ಇದು ಧೈರ್ಯದಾಯಕವಾದದ್ದು ಯಾಕೆಂದರೆ ಹೆರೋದ ಮತ್ತು ಹೆರೋದ್ಯಳು ತಾವು ಕೇಳಬೇಕೆಂದು ಬಯಸಿದ್ದನ್ನು ಕೇಳದೆ ತಾನು ಹೇಳುವದು ಕೇಳುವದು ಅವಶ್ಯವೆಂದು ಯೋಹಾನನು ಹೇಳುವವನಾಗಿದ್ದಾನೆ. ಅನೇಕ "ಸುವಾರ್ತೆ ಸಂದೇಶಗಳು" ಯಾವುದನ್ನೂ ರೇಗಿಸುವುದಿಲ್ಲ, ಆದರೆ ಅವಳನ್ನು ಇಟ್ಟುಕೊಂಡಿರುವುದು ಧರ್ಮವಲ್ಲವೆಂದು ಹೇಳಿದ ಯೋಹಾನನು ಹುಬ್ಬೆತ್ತುವಂತೆ ಮಾಡಿದನು, ಮತ್ತು ಇದು ಆತನ ಕೇಳುಗರನ್ನು ಗಲಿಬಿಲಿಮಾಡಿತು! ಇದು ಧೈರ್ಯದಾಯಕವಾದದ್ದು ಯಾಕೆಂದರೆ ಆತನ ಮಾತುಗಳು ಆತನ ಜೀವಕ್ಕೆ ಕುತ್ತಾಗಿವೆ ಎಂದು ಪ್ರವಾದಿಯು ಬಲ್ಲವನಾಗಿದ್ದನು. ಯಾವುದೇ ಪರಿಣಾಮದ ಕಷ್ಟವನ್ನನುಭವಿಸದೇ ಹೆರೋದನು ಹೆರೋದ್ಯಳೊಡನೆ[20] ತನ್ನ ಹೆಂಡತಿಯಂತೆ ಇರುವುದನ್ನು ಖಂಡಿಸಿದ್ದಕ್ಕೆ ಒಬ್ಬನು ರೇಗದೇ ಇರಲಾರನು. ಯೋಹಾನನು "ಗಾಳಿಗೆ ಅಲ್ಲಾಡುವದುಂಟು" ಅಲ್ಲ ಎಂದು ಯೇಸು ಹೇಳಿದನು (ಮತ್ತಾಯ 11:7). ಬದಲಾಗಿ ಆತನು ಪಾಪದ ವಿರುದ್ಧವಾಗಿ ಮಾತನಾಡುವ ದೇವರ ನಿಶ್ಚಲನಾದ ಮತ್ತು ಧೈರ್ಯದಾಯಕವಾದ ಧ್ವನಿ ಆಗಿದ್ದಾನೆ!

ತಿರುಗೊಂದಾವರ್ತಿ, ಉತ್ತರಾರ್ಧದ ವಿವರವನ್ನು ನೀವು ತಿಳುಕೊಳ್ಳಬಹುದು: ಯೋಹಾನನು ಹೇಗೆ ಸೆರೆಹಿಡಿಯಲ್ಪಟ್ಟನು ಮತ್ತು ಕುಡಿತದ ಕೂಟದಲ್ಲಿ ನೃತ್ಯಗಾತಿಯೂ ಮತ್ತು ಕರುಣಹೀನವಾದ ಹೆಂಡತಿಯಿಂದಾಗಿ ಆತನು ಅಂತಿಮವಾಗಿ ತನ್ನ ಜೀವವನ್ನು ಕಳಕೊಂಡನು.[21] ಒಂದು ಹೇಳಿಕೆಯಂತೆ, ಯೋಹಾನನ ತಲೆಯು ಹೆರೋದ್ಯಳ ಬಳಿ ತಂದಾಗ ಆಕೆಯು ಪ್ರವಾದಿಯ ನಾಲಿಗೆಗೆ ಒಂದು ಉದ್ದವಾದ ಪಿನ್ನನ್ನು ಚುಚ್ಚಿ "ಅವಳನ್ನು ಇಟ್ಟುಕೊಂಡಿರುವದು ಧರ್ಮವಲ್ಲವೆಂದು!" ನೀನೆಂದೂ ಹೇಳಲಾರೆ ಎಂದು ಕೂಗಿದಳು ಎಂದಿದೆ.

ಹೆರೋದ್ಯಳು ತಾನು ಯೋಹಾನನನ್ನು ಸುಮ್ಮನಾಗಿದೆ ಎಂದು ಕೊಂಡಳು, ಆದರೆ ಅವಳಿಂದ ಹಾಗೆ ಮಾಡಲಾಗಲಿಲ್ಲ. ಧೈರ್ಯದಾಯರ ಮನುಷ್ಯನ ಆ ಧ್ವನಿಯು ಎಂದಿಗೂ ಶಾಂತವಾಗದು. ಸ್ನಾನಿಕನಾದ ಯೋಹಾನನ ಸಾವು ಹೆರೋದನ ಮನಸ್ಸನ್ನು ಕಿತ್ತುತಿನ್ನತೊಡಗಿತು, ಯೇಸುವಿನ ಕಾರ್ಯದ ಬಗೆಗೆ ಆತನು ಕೇಳಿದಾಗ, ಯೇಸು ಮರಣದಿಂದ ಎಬ್ಬಿಸಲ್ಪಟ್ಟ ಯೋಹಾನನಾಗಿದ್ದಾನೆ ಎಂಬ ಸಾಧ್ಯತೆಯು ಆತನನ್ನು ಕಾಡತೊಡಗಿತು (ಮಾರ್ಕ 6:14). ಯೋಹಾನನು ಸತ್ತು ಕೆಲ ಸಮಯಗಳ ತರುವಾಯವೂ ಕೂಡಾ ಆತನ ಪ್ರಭಾವವು ಎಷ್ಟಿತ್ತೆಂದರೆ ಯೇಸು ಆತನ ಕಾರ್ಯಗಳನ್ನು ತನ್ನನ್ನು ಪ್ರಶ್ನಿಸಿದವರಿಗೆ ಉತ್ತರಿಸಲು ಬಳಸುತ್ತಿದ್ದನು (ಮತ್ತಾಯ 21:23-27; ಲೂಕ 20:2-8).

ಯೋಹಾನನಂತೆ ಉನ್ನತ ಅಥವಾ ಕೆಳತರದ ಸ್ಥಾನದಲ್ಲಿರುವ ಪಾಪದ ವಿರುದ್ಧವಾಗಿ ಮಾತನಾಡುವಂತಹ ಧೈರ್ಯವನ್ನು; ಜನರ ಹತ್ತಿರ ವೈಯಕ್ತಿಕವಾಗಿ ಹೋಗಿ ಅವರ ಪಾಪಗಳ ಬಗೆಗೆ ತಿಳಿಸುವ; ಯಾವ ಜನರಿಗೆ ಅವಶ್ಯವಿದೆಯೋ, ಅವರು ಬಯಸುವುದನ್ನೇ ಮಾತ್ರವಲ್ಲ ಸಾಧ್ಯವಿರುವ ಪರಿಣಾಮಗಳನ್ನು ಮೀರಿ ಅವರ ಹತ್ತಿರ ಹೋಗಿ ಮಾತನಾಡುವ ಧೈರ್ಯವನ್ನು ದೇವರು ನಮಗೆ ಕೊಡಲಿ. ನಮ್ಮಲ್ಲಿ ಪ್ರತಿಯೊಬ್ಬರಿಗೂ ಯೇಸೂ ಇಂದೂ ಸವಾಲನ್ನು ಒಡ್ಡುವವನಾಗಿದ್ದಾನೆ. "ನೀನು ಸಾಯಬೇಕಾದರೂ ನಂಬಿಗಸ್ತನಾಗಿರು ..." ನಾನು ನಿನಗೆ ಜೀವವೆಂಬ ಜಯಮಾಲೆಯನ್ನು ಕೊಡುವೆನು (ಪ್ರಕಟನೆ 2:10; New Century version).

## ಮುಕ್ತಾಯ

ಯೋಹಾನನ "ಧ್ವನಿಯು ... ಅರಣ್ಯದಲ್ಲಿ ಕೂಗುತ್ತಾ" ಇದೆ:

... ಸ್ವೇಚ್ಛೆ ಸಂತೋಷಗೊಳ್ಳು ಅರಣ್ಯದಲ್ಲಿ, "ನಿನ್ನನ್ನು ನಿರಾಕರಿಸು" ಎಂಬ ಕೂಗು.
... ಸಮಾಧಾನದ ಅರಣ್ಯದಲ್ಲಿ, "ನಿನ್ನ ಮಾರ್ಗವನ್ನು ಬದಲಾಯಿಸು" ಎಂದು ಕೂಗುವ ಧ್ವನಿ.
... ಸಂಶಯದ ಅರಣ್ಯದಲ್ಲಿ "ನಂಬು" ಎಂದು ಕೂಗುವ ಧ್ವನಿ.
... ಗರ್ವದ ಅರಣ್ಯದಲ್ಲಿ "ನಂಬು" ಎಂದು ಕೂಗುವ ಧ್ವನಿ.
... ಹೇಡಿತನದ ಅರಣ್ಯದಲ್ಲಿ "ಧೈರ್ಯವಂತನಾಗಿರು" ಎಂದು ಕೂಗುವ ಧ್ವನಿ.

ಅಂಥ ಧ್ವನಿಯನ್ನು ಹೊಂದಲು ಯೋಹಾನನು ಹೇಗೆ ಸಮರ್ಥನಾದನು? ಆತನ ರಹಸ್ಯವೇನು? ಆತನು ತನ್ನನ್ನು ಕರ್ತನ ಚಿತ್ತಕ್ಕೆ ಒಪ್ಪಿಸಿಕೊಟ್ಟನು. ಆತನು ಭಿನ್ನವಾಗಿರುವ ಧೈರ್ಯವನ್ನು ಮಾಡಿದನು. ಇತರರ ಧ್ವನಿಯು ಶಾಂತವಾದಲ್ಲಿ ಆತನು ಮಾತನಾಡಲು ಬಯಸಿದನು.

ಇಂದು ದೇವರು ಯೋಹಾನನಂತೆ ಇರಲು ನಮಗೆ ಅನೇಕ ಸ್ತ್ರೀ ಮತ್ತು ಪುರುಷರನ್ನು ಕೊಡಲಿ. ನಮ್ಮಲ್ಲಿ ಪ್ರತಿಯೊಬ್ಬರೂ ಯೋಹಾನನಂತೆ ಆಗಲು ನನ್ನ ದೇವರು ಸಹಾಯಿಸಲಿ![22]

---

ಟಿಪ್ಪಣಿಗಳು

[1]ಈ ಪ್ರಸಂಗದಲ್ಲಿನ, "ಸ್ನಾನಿಕನಾದ" ಎಂಬುದರ ಅರ್ಥವನ್ನು ನೀವು ವಿವರಿಸಬಹುದು. [2]ಅರಸನು ಬರುವುದನ್ನು ಘೋಷಿಸುವ ಅಥವಾ ಆತನ ಬರುವಿಕೆಗೆ ಸಿದ್ಧಮಾಡುವ ಹಿನ್ನಲೆಯನ್ನು ಇಲ್ಲಿ ನೀವು ವಿವರಿಸಬಹುದು. [3]ಈ ಪ್ರಸಂಗದ ಮೇಲಿನ ಟಿಪ್ಪಣಿಗಳು ವರುಷಗಳ ಹಿಂದೆ ಮಾಡಲ್ಪಟ್ಟವುಗಳು ಆಗಿದ್ದು, ಅವುಗಳ ಮೂಲಗಳನ್ನು ದಾಖಲಿಸುವದಕ್ಕೆ ಪ್ರಾರಂಭಿಸುವುದಕ್ಕಿಂತ ಮುಂಚಿನವು ಆಗಿವೆ. ಯಾವುದೇ ಕಾರಣದಿಂದ ನಾನು ಹೇಳಲ್ಪಟ್ಟ ಮೂಲಗಳಿಗೆ ಋಣಿಯಾಗದೆ ಉಳಿದುಕೊಂಡಿದ್ದೇ ಆದರೆ ಅದಕ್ಕಾಗಿ ನಾನು ಮೊದಲೇ ಕ್ಷಮೆಕೋರುವವನಾಗಿದ್ದೇನೆ. [4]ಈ ಸಂದರ್ಭದಲ್ಲಿ, "ಮಿಡತೆ" ಎಂಬುದು ನಾವು ಯಾವುದನ್ನು ಮಿಡತೆ ಎಂದು ಕರೆ ಯುತ್ತೇವೆಯೋ ಅದು ಅಲ್ಲಿ ಸೂಚಿಸಲ್ಪಟ್ಟಿಲ್ಲ. "ಹಸಿರು ಕುದುರೆ"ಯ ಬಗೆಗೆ ಯೋಚಿಸಿ. [5]ಅಂಥ ಸಂಪ್ರದಾಯವನ್ನು ನಾನು ಹೊಂದಿದ್ದಕ್ಕೆ ದೇವರಿಗೆ ಸ್ತೋತ್ರ ಸಲ್ಲಿಸುತ್ತೇನೆ. ನೀವು ಈ ರೀತಿಯಲ್ಲಿ ಆಶೀರ್ವಾದವನ್ನು ಹೊಂದಿದ್ದಾದರೆ, ನೀವು ಅದನ್ನು ಸೂಚಿಸಲು ಬಹುದು. [6]ಈ ಕಥೆಯ ವಿವರಣೆಗಾಗಿ *ಕ್ರಿಸ್ತನ ಜೀವನ ಚರಿತ್ರೆ, 2ನೇ* ಪುಸ್ತಕದಲ್ಲಿನ "ಕ್ರಿಸ್ತನು ಬರುತ್ತಾನೆ" ಎಂಬ ಪಾಠವನ್ನು ನೋಡಿರಿ! ಈ ಕಥೆಗೆ ನಿಮ್ಮ ಕೇಳುಗರು ಅಪರಿಚಿತರಾಗಿದಿದ್ದೇಯಾದರೆ ಅದನ್ನು ಮನನ ಮಾಡಿಕೊಡಲು ಕೆಲವು ನಿಮಿಷಗಳನ್ನುನೀವು ತೆಗೆದುಕೊಳ್ಳಬಹುದು. [7]ಲೂಕ 1:80ರಲ್ಲಿ ಭಾಷಾಂತರವಾದ "ಅರಣ್ಯ ಪ್ರದೇಶ" ಎಂಬ ಗ್ರೀಕ್‌ಪದವು ಯೋಹಾನ 1:23ರಲ್ಲಿ ಭಾಷಾಂತರವಾದ "ಅಡವಿ" ಎಂಬ ಪದವು ಒಂದೇ ಮೂಲ ಅರ್ಥವನ್ನು ಹೊಂದಿದೆ. [8]ಆತನು ಇನ್ನೂ ಯೌವನಸ್ಥನಾಗಿರುವಾಗಲೇ ಆತನ ತಂದೆತಾಯಿಗಳು ತೀರಿಹೋದರು ಮತ್ತು ಆ ಸಂದರ್ಭದಲ್ಲಿಯೇ ಆತನು ಅರಣ್ಯ ಪ್ರದೇಶಕ್ಕೆ ಹೋಗಿರ ಬಹುದು ಎಂದು ಸೂಚಿಸುವವರಾಗಿದ್ದಾರೆ - ಆದರೆ ಇದು ಕೇವಲ ತರ್ಕವಾಗಿದೆ. [9]ಸೋದೋಮ್ ಗೋಮೂರ್ ಪಟ್ಟಣಗಳು ಮೃತ್ಯು ಸಮುದ್ರದ ಹತ್ತಿರ ಹರಿಯುವ ಯೊರ್ದಾನ್ ನದಿಯ ಸ್ಥಳದಲ್ಲಿ ಸ್ಥಿತವಾಗಿದ್ದವು ಎಂದು ಕೆಲಪಂಡಿತರು ನಂಬುವವರಾಗಿದ್ದಾರೆ. [10]ನನ್ನ ಟಿಪ್ಪಣಿಗಳಲ್ಲಿ, ಸ್ವೇಚ್ಛಾಪರವಾದ ಉದಾಹರಣೆಗಳನ್ನು ನಾನು ಹೊಂದಿದ್ದು ನಾನು ಇರುವ ಪ್ರದೇಶದಲ್ಲಿ ಅವುಗಳು ಯೋಗ್ಯವಾಗಿವೆ. ನಿಮ್ಮ ಕೇಳುಗರಿಗೆ ಹೊಂದಿಕೆಯಾಗುವಂತೆ ಈ ಪ್ರಸಂಗವನ್ನು ವಿಸ್ತರಿಸಿರಿ. ನೀವು ಇರುವ ಪರಿಸರದಲ್ಲಿ, ಐಶರಾಮಿ ಸಂಗತಿಗಳು ಲಭ್ಯ ಇದ್ದರೂ ಕೂಡಾ ಈ ಅನ್ವಯವನ್ನು ಇನ್ನೂ ಮಾಡಬಹುದು.

[11]ಗಲಾತ್ಯ 4:4. [12]"Sic'im" ಇದೊಂದು "Sic him"ದ ಸಂಕ್ಷಿಪ್ತಿಕರಿಸುವಿಕೆ ಆಗಿದೆ. "Sic" ಇದೊಂದು ದಾಳಿಯ ಆಜ್ಞೆಯಾಗಿದೆ. ಈ ವಾಕ್ಯದಲ್ಲಿನ ಈ ಉದಾಹರಣೆಯು ನನ್ನ ಭಾಗದ ಜನರಿಗೆ ಅನ್ವಯವಾ ಗುವುದಾಗಿದೆ. ಈ ಉದಾಹರಣೆಯನ್ನು ನೀವು ಇರುವೆಡೆ ಯೋಗ್ಯವಾದದ್ದಾದರೆ ಬಳಸಬಹುದು. [13]ಈ ಪರಿಚ್ಛೇದದ ಮೂಲಕ ನೀವು ಸಾಗುವಾಗ, ನೀವು ಇರುವೆಡೆಗೋಸ್ಕರ ಸಂಕ್ಷಿಪ್ತವಾಗಿ ಅನ್ವಯವನ್ನು ಮಾಡಿರಿ. ಯೋಹಾನನ ಅನೇಕ ಮಾತುಗಳು ("ಸಮಾಧಾನದಿಂದಿರು"

ಎಂಬಥ ಮಾತುಗಳು) ನನ್ನನ್ನು ಆರೋಪಿಸುವಂತಿವೆ. [14]"ಸಮೀಪವಾಯಿತು" ಎಂಬ ಪಾಠದಲ್ಲಿ ಚರ್ಚಿತವಾದ ಯೇಸುವಿನ ದೀಕ್ಷಾಸ್ನಾನದ ಕಥೆಯು *ಕ್ರಿಸ್ತನ ಜೀವನ ಚರಿತ್ರೆ, 1ನೇ* ಪುಸ್ತಕದಲ್ಲಿ ಸಿಕ್ಕುವುದಾಗಿದೆ. ನಿಮ್ಮ ವಿದ್ಯಾರ್ಥಿಗಳು ಈ ಕಥೆಗೆ ಅಪರಿಚಿತರಾಗಿದ್ದಾದರೆ, ಆ ಘಟನೆಗಳನ್ನು ನೀವು ವರ್ಣಿಸಬಯಸಬಹುದು. [15]ಈ ವಾಕ್ಯವು Charles R. Swindoll, *John the Baptizer* (Anaheim, Calif.: Insight for Living, 1991), 3ರಿಂದ ಎರವಲು ತೆಗೆದುಕೊಂಡಿದ್ದಾಗಿದೆ. [16]ಯೋಹಾನನ ದೀನತೆಯ ಬೆಳಕಿನಲ್ಲಿ, ಆತನೆಂದಿಗೂ ಬಯಸದ ಘಟ್ಟಕ್ಕೆ ಆತನನ್ನು ಏರಿಸುವ ಕೆಲವರ ಪ್ರಯತ್ನವು ಇದೊಂದು ವ್ಯಂಗಮಯವಾಗಿದೆ. ಕಳೆದು ಹೋದ ದಿನಗಳಲ್ಲಿ, ಯೋಹಾನನ ದಿನಗಳಲ್ಲಿ ಅಸ್ತಿತ್ವದಲ್ಲಿರುವ ರಾಜ್ಯದ/ಸಭೆಯ ಬಗೆಗೆ ಜನರು ಮಾತನಾಡುವದು ಅಸಹಜವಾದದ್ದು ಆಗಿತ್ತು, ಆದರೆ ಮತ್ತಾಯನು ಅಧ್ಯಾಯ 14ರಲ್ಲಿ ಯೋಹಾನನ ಮರಣದ ಬಗೆಗೆ ಮತ್ತು ಅಧ್ಯಾಯ 16ರಲ್ಲಿ ಯೋಹಾನನ ಮರಣದ ಬಗೆಗೆ ಮತ್ತು ರಾಜ್ಯದ/ಸಭೆಯ ಅಸ್ತಿತ್ವದ ವಾಗ್ದಾನದ ಬಗೆಗೆ ಮಾತನಾಡಿದ್ದಾನೆ. "ಯೇಸು ಚಿಂತಿಸುವವನಾಗಿದ್ದಾನೆಯೇ?" ಎಂಬ ಪಾಠವನ್ನು *ಕ್ರಿಸ್ತನ ಜೀವನ ಚರಿತ್ರೆ, 2ನೇ* ಪುಸ್ತಕದಲ್ಲಿನ ಲೂಕ 7:28ರ ಮೇಲಿನ ವಿಶ್ಲೇಷಣೆಯನ್ನು ಪುನರಾವರ್ತಿಸಿರಿ. ಹಿಂದಿನ ದಿನಗಳಲ್ಲಿ, "ಸ್ನಾನಿಕನಾದ" ಎಂಬ ಪದವನ್ನು ತಮ್ಮನ್ನು ತಾವು ನ್ಯಾಯಪರರು ಎಂದು ಆ ಪದದಿಂದ ಕರೆದುಕೊಳ್ಳುತ್ತಿದ್ದರು. "ಸ್ನಾನಿಕನಾದ" ಎಂಬುದರ ಅರ್ಥವನ್ನು ನೀವು ವಿವರಿಸಬಹುದು. [17]ಉದಾಹರಣೆಗಾಗಿ, ಈ ಪ್ರಸಂಗದಲ್ಲಿ ಸೆರೆಯಲ್ಲಿ ಇರುವವನಾಗಿ ಬಿಡಲ್ಪಟ್ಟಿದ್ದು ಇಲ್ಲಿ ಯೋಹಾನನ ಅಲ್ಪಕಾಲೀಯ ವಿವರಣೆಯಲ್ಲಿನ ಲೋಪವಾಗಿದೆ. ಈ ಘಟನೆಯು ಹೃದಯಂಗಮವಾಗಿದೆ (ಕ್ರಿಸ್ತನ ಜೀವನ ಚರಿತ್ರೆ, 2ನೇ ಪುಸ್ತಕದಲ್ಲಿನ "ಯೇಸು ಚಿಂತಿಸುವವನಾಗಿದ್ದಾನೆಯೇ?" ಪಾಠವನ್ನು ಅಧ್ಯಯನ ಮಾಡಿರಿ), ಆದರೆ ಈ ಮಂಡನೆಯ ಸಹಜವಾದ ಭಾವದಲ್ಲಿ ಇದು ಹೊಂದಿಕೊಳ್ಳದು. [18]ಹೆರೋದನು ಯೋಹಾನ ಮಾತನ್ನು ಕೇಳಲು ಬಯಸುತ್ತಿದ್ದನು (ಮಾರ್ಕ 6:20) ಎಂದು ನಂತರದಲ್ಲಿ ಹೇಳಲ್ಪಟ್ಟಿದೆ, ಹೀಗೆ ಇದು ಸಾಮ್ರಾಜ್ಯದ ಹೊರಗಿನ ಸಾಧ್ಯತೆಯು ಆಗಿರಲಿಲ್ಲ. [19]ಈ ಪರಿಚ್ಛೇದದಲ್ಲಿ ಸೂಚಿತವಾದ ಕೆಲ ಸತ್ಯಗಳು ಹಿಂದೆ ಕೊಡಲ್ಪಟ್ಟ "ಸಮಾಧಾನದ ಅರಣ್ಯದಲ್ಲಿ ನಿನ್ನ ಮಾರ್ಗವನ್ನು ಬದಲಾಯಿಸು" ಎಂದು ಕೂಗುವ ಧ್ವನಿ ಎಂಬುದಕ್ಕೆ ಸಮವಾಗಿವೆ. ಪುನರಾವರ್ತನೆಗೆ ನಾನೇನು ಕ್ಷಮೆ ಕೋರೆನು. ಎರಡು ಸಾರಿ ಒತ್ತಿ ಹೇಳುವದಕ್ಕೆ ಈ ಸತ್ಯಗಳ ಮಹತ್ವವನ್ನು ಸಂಸ್ಥಾಪಿಸುವುದೇ ಆಗಿದೆ. [20]ಹೆರೋದ ಮತ್ತು ಹೆರೋದ್ಯಳು ಹೊಸ ಒಡಂಬಡಿಕೆಯ ಆಹಾಬ ಮತ್ತು ಇಜಬೇಲಳು ಎಂದು ಕರೆಯಲ್ಪಡುತ್ತಾರೆ.

[21]ನಿಮ್ಮ ಕೇಳುಗರಿಗೆ ಈ ಕಥೆಯು ಅಪರಿಚಿತವಾಗಿದ್ದಾದರೆ, ನೀವು ಆ ಕಥೆಯನ್ನು ಸಂಕ್ಷಿಪ್ತವಾಗಿ ಹೇಳಬಹುದು. (ಈ ಪುಸ್ತಕದ ನಂತರದಲ್ಲಿ ಸಿಕ್ಕುವ "ಯಶಸ್ಸಿನ ಅಪಾಯ" ಎಂಬ ಪಾಠವನ್ನು ಅಧ್ಯಯನ ಮಾಡಬಹುದು.) [22]ಇದನ್ನು ಪ್ರಸಂಗವಾಗಿ ಮತ್ತು ಒಂದು ಆಮಂತ್ರಣವನ್ನಾಗಿ ಕೊಡುವುದಕ್ಕಾಗಿ ಬಳಸಿದ್ದಾದರೆ, ವ್ಯಕ್ತಿಗಳಾಗಿ ಅವರು ತಮ್ಮ ಜೀವಿತವನ್ನು ಒಪ್ಪಿಸಿಕೊಡುವಂತ ಆಮಂತ್ರಣವನ್ನು ಒತ್ತಿಹೇಳಿರಿ ನಂಬಿಕೆಯ ಪ್ರತಿಕ್ರಿಯೆಯನ್ನು ಮತ್ತು ಹೊಸ ಒಡಂಬಡಿಕೆಯಲ್ಲಿ ವಿಧೇಯತೆಗಾಗಿ ಇರುವ ಕರೆಗಾಗಿ (ಮಾರ್ಕ 16:15, 16; ಅಪೊಸ್ತಲರ ಕೃತ್ಯಗಳು 2:38) ಒತ್ತಿ ಹೇಳುವಿಕೆಗೆ ಪ್ರತಿಯಾಗಿ ಕರ್ತನಿಗೆ "ನಾನು ನಿನಗೆ ನನ್ನ ಜೀವಿತವನ್ನು ಕೊಡುತ್ತೇನೆ, ನಿನೇನನ್ನು ಬಯಸುತ್ತಿಯೋ ಅದನ್ನೇ ನಾನು ಮಾಡುತ್ತೇನೆ" ಎಂದು ಹೇಳಿರಿ.